ದಿನಾಂಕ 19/07/2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಮಾನ್ಯ ಶ್ರೀ ಜೆ ಎನ್ ಎನ್ ವಕೀಲರಿಂದಃ**

ನಾನು 10 ನೇ ತರಗತಿ ತನಕ ಶಿಕ್ಷಣ ಪಡೆದಿರುತ್ತೇನೆ. ವಾದಿ ನನ್ನ ಅಣ್ಣನಾಗಬೇಕು. ನಾನು ಪ್ರಸುತ್ತ ಇಟ್ಟುಕೊಂಡಿರುವ ಪೆಟ್ಟಿಗೆ ನನ್ನ ಹಾಗೂ ನನ್ನ ಅಣ್ಣನ ನಡುವೆ ವಿಭಾಗದಲ್ಲಿ ನನಗೆ ಬಂದಿರುತ್ತದೆ. ಸದರಿ ವಿಭಾಗ 1988 ನೇ ಇಸವಿಯಲ್ಲಿ ನಡೆದಿರುತ್ತದೆ. ಸದರಿ ವಿಭಾಗ ನೋಂದಣಿ ಮಾಡಿಸಿರುತ್ತೇನೆ. ಸದರಿ ವಿಭಾಗದಲ್ಲಿ ಒಟ್ಟು ಕುಟುಂಬದ ಎಲ್ಲಾ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತೇವೆ. ಸಾಕ್ಷಿಗೆ ನಿ ಪಿ 2 ನ್ನು ತೋರಿಸಲಾಗಿ ಸಾಕ್ಷಿ ನಿ ಪಿ 2 ರ ಮೂಲಕವೇ ವಿಭಾಗ ಆಗಿರುತ್ತಾರೆ ಎಂದು ಒಪ್ಪುತ್ತಾರೆ ಹಾಗೂ ತನ್ನ ಸಹಿಯನ್ನು ಸಹಾ ಗುತಿರ್ಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿ ಪಿ 2 ಎ ಯಿಂದ ನಿ ಪಿ 2 ಇ ಎಂದು ಗುತಿರ್ಸಲಾಯಿತು. ಸದರಿ ದಾಖಲಾತಿಯ ಅನುಸೂಚಿಯಲ್ಲಿ ಸಾಕ್ಷಿ ತನ್ನ ಸಹಿ ಗುತಿರ್ಸಿದ್ದ ಮೇರೆಗೆ ಸದರಿ ಸಹಿಯನ್ನು ನಿ ಪಿ 2 ಎಫ್ ಎಂದು ಗುತಿರ್ಸಲಾಯಿತು.

ಸದರಿ ಅನುಸೂಚಿ ಪ್ರಕಾರ ಎ ಷೆಡ್ಯೂಲ್ ಸ್ವತ್ತು ವಾದಿಗೆ ಬಂದಿದ್ದು ಬಿ ಷೆಡ್ಯೂಲ್ ಸ್ವತ್ತು ನನಗೆ ಬಂದಿರುತ್ತದೆ ಎಂದರೆ ಸರಿ. ಸದರಿ ವಿಭಾಗದ ಎ ಷೆಡ್ಯೂಲ್ ಸ್ವತ್ತುಗಳಲ್ಲಿ ವಾದಿಯೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸಾಕ್ಷಿ ಹೇಳುತ್ತಾರೆ ಅದರ ಒಂದು ಆಸ್ತಿಯಲ್ಲಿ ನಾನು ಸ್ವಾಧೀನದಲ್ಲಿ ಇರುತ್ತೇನೆ ಎಂದು ಹೇಳುತ್ತಾರೆ. ಸದರಿ ವಿಭಾಗ ಪತ್ರ ನಾನು ಓದಿ ಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿ ಹೇಳುತ್ತಾರೆ ನಮ್ಮ ಹಿರಿಯರು ಸಹಿ ಮಾಡು ಅಂದಿದ್ದ ಕಾರಣ ನಾನು ಸಹಿ ಮಾಡಿರುತ್ತೇನೆ. ಕಾನ್ಮೂತಕವಾಗಿ ಯಾವುದೇ ದಾಖಲಾತಿಯನ್ನು ನಾವು ಓದಿಕೊಂಡು ಸಹಿ ಹಾಕಬೇಕಾಗುತ್ತದೆ ಎಂದರೆ ಸಾಕ್ಷಿ ಹೇಳುತ್ತಾರೆ ನಮ್ಮ ಹಿರಿಯರು ಹೇಳಿದ ಮೇರೆಗೆ ಸಂಪ್ರದಾಯಂತೆ ನಾವು ಸಹಿ ಹಾಕಬೇಕು.

ಎ ಷೆಡ್ಯೂಲ್ ಸ್ವತ್ತಿನ ಸರ್ವೇ ನಂ 472/2 ರಲ್ಲಿ ನಾನು ಸ್ವಾಧೀನದಲ್ಲಿರುತ್ತೇನೆ. ಸದರಿ ಸರ್ವೇ ನಂ 472/2 ಹೆಣ್ಣು ಮಕ್ಕಳಿಗೆ ನೀಡಬೇಕಾಗಿದ್ದರಿಂದ ಅದನ್ನು ವಿಭಾಗ ಪತ್ರದ ಅನುಸೂಚಿಯಲ್ಲಿ ನನ್ನ ಪಾಲಿಗೆ ಸೇರಿಸಿಕೊಂಡಿರುವುದಿಲ್ಲ. ಸದರಿ ವಿಭಾಗ ಪತ್ರದಲ್ಲಿ ಹೆಣ್ಣು ಮಕ್ಕಳಿಗೆ ಕೊಡಬೇಕೆಂದು ಯಾವುದೇ ಷರಾ ಬರೆದಿರುವುದರ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೇ ನಂ 472/2 ನಾನೇ ಖುದ್ದು ಮಾಡಿದ ಸ್ವತ್ತಾಗಿರುತ್ತದೆ. ಸರ್ವೇ ನಂ 472/2 ಖರೀದಿ ಮಾಡಬೇಕಾದರೆ ನಾನು ನನ್ನ ಅಣ್ಣ ಇಬ್ಬರು ಜೊತೆಯಲ್ಲಿದ್ದೆವು. ವಿಭಾಗ ಆಗುವ ಕಾಲಕ್ಕೆ ನನ್ನ ಮತ್ತು ನನ್ನ ಅಣ್ಣನ ಪಾಲಿಗೆ ಇದ್ದಂತಹ ಎಲ್ಲಾ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ.

ದಾವಾ ಸ್ವತ್ತಿನಲ್ಲಿ ನಾನು ಇಟ್ಟಿರುವಂತಹ ಪೆಟ್ಟಿಗೆ ಅಂಗಡಿ ನನಗೆ ವಿಭಾಗದಲ್ಲಿ ಬಂದಂತಹ ಆಗಿರುತ್ತದೆ ಎಂದರೆ ಸರಿ. ವಿಭಾಗದ ಪ್ರಕಾರ ನನಗೆ ಬಂದಂತಹ ಸ್ವತ್ತಿನ ವಿಸ್ತೀಣರ್ ಪೂರ್ವ ಪಶ್ಚಿಮ 11 ಅಡಿ ಮತ್ತು ಉತ್ತರ ದಕ್ಷಿಣ 18 ಅಡಿ ಎಂದರೆ ಸರಿ. ನನ್ನ ಅಂಗಡಿಯ ಪಶ್ಚಿಮಕ್ಕೆ 11 x 18 ರ ಒಂದು ಅಂಗಡಿ ಮತ್ತು ಎರಡು ಅಂಗಡಿಗಳ ಉತ್ತರಕ್ಕೆ ಪೂರ್ವ ಪಶ್ಚಿಮ 22 ಅಡಿ ಮತ್ತು ಉತ್ತರ ದಕ್ಷಿಣ 33 ಅಡಿ ಖಾಲಿ ಜಾಗ ನನ್ನ ಅಣ್ಣನಿಗೆ ಬಂದಿರುತ್ತದೆ ಎಂದರೆ ಸರಿ. ಎರಡು ಅಂಗಡಿಗಳ ಪೂಣರ್ ವಿಸ್ತೀಣರ್ ಭೂ ಸ್ವಾಧೀನಕ್ಕೆ ಒಳಗೊಂಡಿರುತ್ತದೆ ಎಂದರೆ ಸಾಕ್ಷಿ ಹೇಳುತ್ತಾರೆ ನನ್ನ ಅಂಗಡಿಯಲ್ಲಿ ಪೂತಿರ್ ಸ್ವಾಧೀನ ಭೂ ಸ್ವಾಧೀನಕ್ಕೆ ಒಳಗೊಂಡಿರುವುದಿಲ್ಲ.

ನನ್ನ ಅಂಗಡಿಯಲ್ಲಿ ಪೂರ್ವ ಪಶ್ಚಿಮ 11 ಅಡಿ ಮತ್ತು ಉತ್ತರ ದಕ್ಷಿಣ 13 ½ ಅಡಿ ಮಾತ್ರ ಭೂ ಸ್ವಾಧೀನಗೊಂಡಿರುತ್ತದೆ. ನನಗೆ 11 x 5 ಅಡಿ ಬಾಕಿ ಇರುತ್ತದೆ ಎಂಬ ಬಗ್ಗೆ ಇದೇ ನ್ಯಾಯಾಲಯದಲ್ಲಿ ಓ ಎಸ್ 183/08 ನ್ನು ವಾದಿ ವಿರುದ್ಧ ಹೂಡಿದ್ದೆ ಎಂದರೆ ಸರಿ. ಸದರಿ ದಾವೆಯಲ್ಲಿ ನ್ಯಾಯಾಲಯದ ಸ್ಥಳ ತನಿಖೆಗೆ ಬಂದಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನ್ಯಾಯಾಧೀಶರು ಉತ್ತರದ ದಿಕ್ಕಿನಿಂದ ಅಳತೆ ಮಾಡಿದ್ದರು ಎಂದರೆ ಸರಿ. ಸದರಿ ದಿನದಂದು ನ್ಯಾಯಾಧೀಶರು ಉತ್ತರದ ಕಡೆಯಿಂದ ಅಳತೆ ಮಾಡಿ ಬಾವಣನ್ನ 33 ಅಡಿಯನ್ನು ಹೊರತು ಪಡಿಸಿ 1.8 ಅಡಿ ಗೋಡೆಗೆ ಬಂದಿರುತ್ತದೆ ಎಂದರೆ ಸಾಕ್ಷಿ ಹೇಳುತ್ತಾರೆ ಆ 1.8 ಅಡಿ ನನ್ನದಾಗಿರುತ್ತದೆ ಎಂದು ಹೇಳುತ್ತಾರೆ.

ನ್ಯಾಯಾಧೀಶರು ಹಿಂತಿರುಗಿ ಬಂದ ಮೇಲೆ ಸ್ಕೆಚ್ ನ್ನು ತಯಾರು ಮಾಡಿ ಸದರಿ 1.8 ಅಡಿಗೆ ನಮ್ಮನ್ನು ರಾಜಿ ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ಹೇಳುತ್ತಾರೆ 1.8 ಅಡಿ ಮತ್ತು ಅದರ ಮುಂದೆ ಇದ್ದಂತಹ ಹಳೆ ಕಟ್ಟಡ ಒಟ್ಟು 5 ಅಡಿಗೆ ರಾಜಿ ಮಾಡಿರುತ್ತಾರೆ. ರಾಜಿ ಪ್ರಕಾರವೇ ನನ್ನ ಮತ್ತು ವಾದಿಯ ವಕೀಲರು ಸೇರಿ ಸ್ಕೆಚ್ ನ್ನು ತಯಾರು ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ನ್ಯಾಯಾಧೀಶರು ಸದರಿ ದಾವೆಯಲ್ಲಿ ತಯಾರಿಸಿದ್ದಂತಹ ಸ್ಕೆಚ್ ನ್ನು ತೋರಿಸಿ ಸಾಕ್ಷಿ ಸದರಿ ಸ್ಕೆಚ್ ನ್ನು ಒಪ್ಪಿದ್ದು ಅದನ್ನು ನಿ ಪಿ 10 ಎಂದು ಗುರ್ತಿಸಲಾಯಿತು. ನನ್ನ ಅಣ್ಣನಿಗೆ ಬಂದಂತಹ 22 x 33 ರ ಜಾಗದಲ್ಲಿ ನನಗೆ ಹಕ್ಕು ಇರುವುದಿಲ್ಲ ಎಂದರೆ ಸರಿ.

ನನಗೆ ಅಣ್ಣನಿಗೆ ಬಂದಿರುವ ಸ್ವತ್ತಿನಲ್ಲಿ ಕಳಗೆ ಒಂದು ಅಂಗಡಿ ಮತ್ತು ಮೇಲೆ ಒಂದು ಅಂಗಡಿ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿ. ನ್ಯಾಯಾಧೀಶರು ಸ್ಥಳ ತನಿಖೆ ಮಾಡಿದಾಗ ಡಿ ವಿ ಜಿ ರಸ್ತೆ ಇನ್ನೂ ಕಾಮಗಾರಿ ಆಗಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಪೆಟ್ಟಿಗೆ ಅಂಗಡಿಯ ದಕ್ಷಿಣಕ್ಕೆ ಡಿ ವಿ ಜಿ ರಸ್ತೆ ಬರುತ್ತದೆ ಎಂದರೆ ಸರಿ. ಸದರಿ ರಸ್ತೆಯ ಮಧ್ಯೆದಲ್ಲಿ ವಿಭಜಕ ಬರುತ್ತದೆ ಎಂದರೆ ಸರಿ. ಸದರಿ ವಿಭಜಕ 4 ಅಡಿ ಅಗಲ ಇರುತ್ತದೆ ಎಂದರೆ ಸರಿಯಲ್ಲ. ವಿಭಜನೆಯ ಉತ್ತರಕ್ಕೆ 49 ½ ಅಡಿ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ 40 ಅಡಿ ಟಾರ್ ರಸ್ತೆ ಇರುತ್ತದೆ ಎಂದರೆ ಸಾಕಿವ್ಷಿ ಹೇಳುತ್ತಾರೆ ನನಗೆ ತಾಂತ್ರಿಕ ಅಂಶಗಳು ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ.

ಪಾದಚಾರಿ ರಸ್ತೆ 5 ಅಡಿ ಇರುತ್ತದೆ ಎಂದರೆ ಸರಿಯಲ್ಲ. ಪಾದಚಾರಿ ಕೆಳಗಡೆ ಡ್ರೈನೇಜ್ ಇರುತ್ತದೆ ಎಂದರೆ ಸರಿ. ನನ್ನ ಅಣ್ಣ ಕಟ್ಟಿರುವ ಅಂಗಡಿಗಳಲ್ಲಿ ಕಳಗೆ ಹೋಗಲು ಮೆಟ್ಟಿಲುಗಳು ಇರುತ್ತವೆ ಎಂದರೆ ಸರಿ. ಸದರಿ ಮೆಟ್ಟಿಲುಗಳು 2 ½ ಅಡಿ ಅಗಲ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. 49 ½ ಅಡಿಗಳ ಉತ್ತರಕ್ಕೆ ರಸ್ತೆಯಿಂದ ನನ್ನ ಅಣ್ಣ ಅಂಗಡಿಗಳನ್ನು ಕಟ್ಟಿಕೊಂಡಿರುತ್ತಾರ ಎಂದರೆ ಸಾಕ್ಷಿ ಹೇಳುತ್ತಾರೆ ಅವರೂ ಕಟ್ಟಿಕೊಂಡಿರುತ್ತಾರೆ ನಾನು ಕಟ್ಟಿಕೊಂಡಿರುತ್ತೇನೆ ಎಂದು ಹೇಳುತ್ತಾರೆ.

ರಸ್ತೆಯ ಮಧ್ಯಭಾಗದಿಂದ 49 ½ ಅಡಿ ಉತ್ತರಕ್ಕೆ  ಪಾದಚಾರಿ ರಸ್ತೆಯಲ್ಲಿ ನನಗೆ ಆಗಲೀ ನನ್ನ ಅಣ್ಣನಿಗೆ ಆಗಲೀ ಯಾವುದೇ ಹಕ್ಕು ಮತ್ತು ಸ್ವಾಧೀನ ಇಲ್ಲ ಎಂದರೆ ಸಾಕ್ಷಿ ಹೇಳುತ್ತಾರೆ ನನಗೂ ಮತ್ತು ನನ್ನ ಅಣ್ಣನಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದು ಹೇಳುತ್ತಾರೆ. ನನ್ನ ಪೆಟ್ಟಿಗೆ ಅಂಗಡಿ ಪೂ-ಪ 11 ಅಡಿ ಮತ್ತು ಉ-ದ 4 ½ ಅಡಿ ಇರುತ್ತದೆ. ನನ್ನ ಅಂಗಡಿಯನ್ನು ರಸ್ತೆಯ ಮಧ್ಯಭಾಗದಿಂದ ಲೋಕಪಯೋಗಿ ಇಲಾಖೆಯವರು ಅಳತೆ ಮಾಡಿರುತ್ತಾರೆ. ನನ್ನ ಅಂಗಡಿಗಳು 49 ½ ಅಡಿ ಆದ ನಂತರವೇ ಬರುತ್ತದೆ. ಈ ರೀತಿ 49 ½ ಅಡಿ ಆದನಂತರವೇ ನನ್ನ ಅಂಗಡಿಗಳು ಬರುತ್ತವೆ ಎಂದು ನನ್ನ ತಕರಾರು ಪತ್ರದಲ್ಲಿ ನಾನು ಹೇಳಿ ಬರೆಸಿರುತ್ತೇನೋ ಗೊತ್ತಿಲ್ಲ ಸಾಕ್ಷಿ ಹೇಳುತ್ತಾರೆ ನನ್ನ ಸ್ವತ್ತಿನ ಬಗ್ಗೆ ನಾನು ಹೇಳಿಕೊಂಡಿರುತ್ತೇನೆ ಎಂದು ಹೇಳುತ್ತಾರೆ.

ಕೋರಿಕೆಯ ಮೇರೆಗೆ ಮುಂದುಡಲಾಯಿತು.

**(ಉಕ್ತಲೇಖನವನ್ನು ಮುಕ್ತ ನ್ಯಾಯಾಲಯದಲ್ಲಿ ಗಣಕೀಕರಣಗೊಳಿಸಲಾಯಿತು.)**

ಓ.ಹೇ.ಕೇ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಬಾಗೇಪಲ್ಲಿ